# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 71(90) |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ<br>(ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 09.12.2024 |

| | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ವಿಶ್ವವಿದ್ಯಾಲಯದ ದೂರ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ಪದವಿ ಹಾಗೂ ಸ್ನಾತಕೋತ್ತರ ಕೋರ್ಸುಗಳನ್ನು ನಡೆಸಲಾಗುತ್ತಿದ್ದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಕೋರ್ಸುಗಳ ಶೈಕ್ಷಣಿಕ ಕಾಲಾವಧಿಯೆಷ್ಟು; | ಪದವಿ ಕೋರ್ಸುಗಳ ಕನಿಷ್ಠ ಕಾಲಾವಧಿ -3 ವರ್ಷಗಳು ಗರಿಷ್ಠ ಕಾಲಾವಧಿ-6 ವರ್ಷಗಳು.<br><br>ಸ್ನಾತಕೋತ್ತರ ಕೋರ್ಸುಗಳಿಗೆ ಕನಿಷ್ಠ ಕಾಲಾವಧಿ-2 ವರ್ಷಗಳು, ಗರಿಷ್ಠ ಕಾಲಾವಧಿ – 4 ವರ್ಷಗಳು.<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ತಿದ್ದುಪಡಿ ಅಧಿನಿಯಮ 2019ರ ನಂತರ ಬೆಂಗಳೂರು ವಿಶ್ವವಿದ್ಯಾಲಯದಿಂದ ದೂರ ಶಿಕ್ಷಣದಡಿಯಲ್ಲಿ ಕೋರ್ಸುಗಳಿಗೆ ಪ್ರವೇಶಾತಿಯನ್ನು ಮಾಡಿರುವುದಿಲ್ಲ. |
| (ಆ) | ಮೂರು ವರ್ಷದ ಪದವಿ ಕೋರ್ಸ್‌ಗೆ ಐದು ವರ್ಷಗಳ ಕಾಲಾವಧಿ ತೆಗೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ, ಇದಕ್ಕೆ ಕಾರಣಾರಾದವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; | ಬಂದಿರುವುದಿಲ್ಲ. |
| (ಇ) | ಡಿಸೆಂಬರ್-2023ರಲ್ಲಿ ಜರುಗಿದ ಪದವಿ ಕೋರ್ಸು ಉತ್ತೀರ್ಣರಾದವರಿಗೆ ಇದುವರೆಗೂ ಪದವಿ ಪ್ರಮಾಣ ಪತ್ರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮಿನಿ ಘಟಿಕೋತ್ಸವನ್ನು ಯಾವಾಗ ನಡೆಸಲಾಗುವುದು; | ಡಿಸೆಂಬರ್ – 2023ರಲ್ಲಿ ಜರುಗಿದ ಎಲ್ಲಾ ಪದವಿ ಕೋರ್ಸುಗಳಲ್ಲಿ ಉತ್ತೀರ್ಣರಾಗಿ 59ನೇ ವಾರ್ಷಿಕಘಟಿಕೋತ್ಸವಕ್ಕೆ ಅರ್ಜಿ ಸಲ್ಲಿಸಿರುವಂತಹ ಅರ್ಹ ವಿದ್ಯಾರ್ಥಿಗಳಿಗೆ ದಿನಾಂಕ: 10.09.2024ರಂದು ನಡೆದ 59ನೇ ವಾರ್ಷಿಕ ಘಟಿಕೋತ್ಸವದಂತೆ ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸಿ ಸಂಬಂಧಪಟ್ಟ ಕಾಲೇಜುಗಳಿಗೆ ನಿಗಧಿತ ಸಮಯದಲ್ಲಿ ವಿತರಿಸಲಾಗುತ್ತಿದೆ.<br><br>59ನೇ ಮಿನಿ ಘಟಿಕೋತ್ಸವನ್ನು ಡಿಸೆಂಬರ್-2024ರಲ್ಲಿ ನಡೆಸಲಾಗುವುದು. |

| | | |
|---|---|---|
| (ಈ) | ದೂರ ಶಿಕ್ಷಣ ಪದವೀಧರರಿಗೆ ಘಟಿಕೋತ್ಸವ/ಮಿನಿ ಘಟಿಕೋತ್ಸವ ನೆಪವೊಡ್ಡಿ ಫಲಿತಾಂಶ ಬಂದು 10 ತಿಂಗಳಾದರೂ ಪದವಿ ಪ್ರಮಾಣ ಪತ್ರ ನೀಡದೇ ರೆಗ್ಯುಲರ್/ದೂರ ಶಿಕ್ಷಣಾರ್ಥಿಗಳೆಂದು ತಾರತಮ್ಯ ಮಾಡುತ್ತಿರುವವರ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ದೂರ ಶಿಕ್ಷಣ ನಿರ್ದೇಶನಾಲಯವನ್ನು ಮುಚ್ಚುವ ಪ್ರಸ್ತಾವನೆ ಏನಾದರೂ ಸರ್ಕಾರದ ಮುಂದಿದೆಯೆ? (ಸಂಪೂಣವಾಗಿ ವಿವರ ನೀಡುವುದು) | ವಿಶ್ವವಿದ್ಯಾಲಯವು ನಿಯಮಾನುಸಾರ ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಮತ್ತು ದೂರ ಶಿಕ್ಷಣ ಪದವೀದರರು ಮತ್ತು ಎಲ್ಲಾ ರೆಗ್ಯೂಲರ್ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ಪಡೆಯಲು ನಿಗಧಿತ ಶುಲ್ಕ ಪಾವತಿಸಲು ಆಯಾ ವರ್ಷದಲ್ಲಿ ಘಟಿಕೋತ್ಸವದ ಅಧಿಸೂಚನೆಯನ್ನು ಹೊರಡಿಸಲಾಗುವುದು.<br><br>ನಿಗಧಿತ ಶುಲ್ಕ ಪಾವತಿಸಿ ಅರ್ಜಿಯನ್ನು ಸಲ್ಲಿಸಿದ ನಂತರ ಪದವಿ ಪ್ರಮಾಣ ಪತ್ರಗಳನ್ನು ವಿಶ್ವವಿದ್ಯಾಲಯದ ನಿಯಮಾನುಸಾರ ಘಟಿಕೋತ್ಸವವು ಜರಗಿದ ನಂತರ ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸಿ ಸಂಬಂಧಪಟ್ಟ ಕಾಲೇಜುಗಳಿಗೆ ನಿಗಧಿತ ಸಮಯದಲ್ಲಿ ವಿತರಿಸಲಾಗುತ್ತದೆ. ಇದರಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ.<br><br>ಆದುದರಿಂದ, ರೆಗ್ಯೂಲರ್ ಮತ್ತು ದೂರ ಶಿಕ್ಷಣ ವಿದ್ಯಾರ್ಥಿಗಳೆಂದು ಯಾವುದೇ ತಾರತಮ್ಯ ಮಾಡುವುದಿಲ್ಲ.<br><br>2023-24ನೇ ಸಾಲಿನಿಂದ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಯು.ಜಿ.ಸಿ.ಇ. (ದೂರ ಶಿಕ್ಷಣ ಮತ್ತು ಮುಕ್ತ ಕಾರ್ಯಕ್ರಮಗಳ ಮತ್ತು ಆನ್-ಲೈನ್ ಕಾರ್ಯಕ್ರಮಗಳ) ನಿಯಮಾವಳಿಗಳ ಅನುಸಾರ ಯು.ಜಿ.ಸಿ. ಮಾನ್ಯತೆ ಪಡೆದಿರುವ ಒಟ್ಟು ಒಂಬತ್ತು ಆನ್-ಲೈನ್ ಸ್ನಾತಕ ಪದವಿ / ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ಅಂದರೆ, ಬಿ.ಕಾಂ., ಎಂ.ಎ. (ಕನ್ನಡ, ಇಂಗ್ಲೀಷ್, ಹಿಂದಿ, ಅರ್ಥಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ), ಎಂಕಾಂ ಮತ್ತು ಎಂ.ಎಸ್ಸಿ. (ಗಣಿತಶಾಸ್ತ್ರ) ಕೋರ್ಸುಗಳ ತರಗತಿಗಳನ್ನು ನಡೆಸಲಾಗುತ್ತಿದೆ.<br><br>ಇದರಿಂದಾಗಿ, ದೂರ ಶಿಕ್ಷಣ ನಿರ್ದೇಶನಾಲಯವನ್ನು ಮುಚ್ಚುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಇಡಿ/ 454/ ಯುಬಿವಿ/ 2024

(ಡಾ|| ಎಂ.ಸಿ ಸುಧಾಕರ್)
ಉನ್ನತ ಶಿಕ್ಷಣ ಸಚಿವರು.